# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಡಿ.1146/2016/ಸನಿಕಾಸ–2

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:11.7.2017.

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯ:–** ತುಮಕೂರು ತಾಲ್ಲೂಕು ಊರುಕೆರೆ ಗ್ರಾಮದ ಖಾತೆ ಸಂ.2051 ನಿವೇಶನ ಸಂ.11ನ್ನು ದೂರುದಾರರ ಹೆಸರಿನಲ್ಲಿ ಮಾಡಿ ಹಕ್ಕುಪತ್ರದ ಪ್ರಕಾರ ಚೆಕ್‌ಬಂದಿ ಗುರುತಿಸಲು ಹಾಗೂ ಯಾರಾದರೂ ನಿವೇಶನವನ್ನು ಅತಿಕ್ರಮಿಸಿದ್ದರೆ ತೆರವುಗೊಳಿಸಿ ದೂರುದಾರರಿಗೆ ಹಸ್ತಾಂತರಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡುವ ಬಗ್ಗೆ.

*******

ಶ್ರೀಮತಿ ಗಂಗಮ್ಮ, ಜನತಾ ಕಾಲೋನಿ, ಊರುಕೆರೆ ಗ್ರಾಮ, ತುಮಕೂರು ತಾಲ್ಲೂಕು, (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1) ಶ್ರೀ ರಾಮಾಂಜನೇಯ, ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, ತುಮಕೂರು ತಾಲ್ಲೂಕು, (2) ಶ್ರೀ ಜಗದೀಶ್, ಕಾರ್ಯದರ್ಶಿ, ಊರುಕೆರೆ ಗ್ರಾಮ ಪಂಚಾಯತ್, ತುಮಕೂರು ತಾಲ್ಲೂಕು, (ಇನ್ನು ಮುಂದೆ ಕ್ರಮವಾಗಿ 1 ಮತ್ತು 2ನೇ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:–**

ದೂರುದಾರರು ತಮ್ಮ ದೂರಿನಲ್ಲಿ, ತುಮಕೂರು ತಾಲ್ಲೂಕು ಊರುಕೆರೆ ಗ್ರಾಮದ ದೂರುದಾರರ ಗಂಡ ಅಶ್ವತ್ಥ ಅವರಿಗೆ ಖಾತೆ ನಂ.2051 ಸಂಖ್ಯೆ: 11ರ ಮನೆಯು ಪಂಚಾಯತಿಯಿಂದ ಮಂಜೂರಾಗಿದ್ದು, ಅವರು ತೀರಿಕೊಂಡ ನಂತರ ದೂರುದಾರರ ಹೆಸರಿನಲ್ಲಿ ಪೌತಿ ಖಾತೆ ಮಾಡಿರುತ್ತಾರೆ. ಆದರೆ ಇದೇ ಗ್ರಾಮದ ರೌಡಿ ಒ.ಸಿ.ಕೃಷ್ಣಪ್ಪನ ತಂಗಿ ರಾಜಮ್ಮನಿಗೆ ಖಾತೆ ನಂ.341 ಮಾಡಿದ್ದು, ಅವರು ದೂರುದಾರರಿಗೆ ತುಂಬಾ ತೊಂದರೆ ಕೊಡುತ್ತಿದ್ದಾರೆ.

ಎದುರುದಾರರು ಅವರೊಂದಿಗೆ ಷಾಮೀಲಾಗಿ ದೂರುದಾರರ ಹೆಸರಿನಲ್ಲಿರುವ ಖಾತೆಯನ್ನು ರದ್ದುಗೊಳಿಸಿರುತ್ತಾರೆ. ಆದ್ದರಿಂದ ಈ ಬಗ್ಗೆ ಪರಿಶೀಲಿಸಿ ತನಗೆ ನ್ಯಾಯದೊರಕಿಸಬೇಕೆಂದು ಕೋರಿ ದೂರು ಸಲ್ಲಿಸಿದ್ದಾರೆ.

3. 1 ಮತ್ತು 2ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದೂರುದಾರರು ಅಶ್ವತ್ಥಪ್ಪ ಅವರ ಹೆಂಡತಿ ಎನ್ನುವ ಬಗ್ಗೆ ಹಾಗೂ ಊರುಕೆರೆ ಗ್ರಾಮದ ವಾಸಿ ಎನ್ನುವ ಬಗ್ಗೆ ಯಾವುದೇ ದಾಖಲೆ ಸಲ್ಲಿಸಿರುವುದಿಲ್ಲ. ಅಶ್ವತ್ಥ ಅವರಿಗೆ 30.4.1987ರಂದು ಮನೆ ಮಂಜೂರಾಗಿದ್ದು, 2 ವರ್ಷದೊಳಗೆ ಮನೆ ಕಟ್ಟಿಕೊಂಡು ವಾಸಮಾಡಬೇಕಾಗಿತ್ತು. ಆದರೆ ಅವರು ಮನೆ ಕಟ್ಟಿರುವುದಿಲ್ಲ. ಅಲ್ಲದೆ ದೂರುದಾರರು ಈ ಮಧ್ಯೆ ಸಿವಿಲ್ ನ್ಯಾಯಾಲಯಕ್ಕೆ ಹೋಗಿದ್ದಾರೆಂದು ತಿಳಿದುಬಂದಿರುತ್ತದೆ. ಆದ್ದರಿಂದ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

4. ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ದೂರಿನ ಅಂಶಗಳನ್ನು ಪುನರುಚ್ಚರಿಸಿರುತ್ತಾರೆ.

5. ದೂರುದಾರರು ಸಲ್ಲಿಸಿದ ದೂರು ಆಕ್ಷೇಪಣೆ, ಪ್ರತ್ಯುತ್ತರ ಮತ್ತು ದಾಖಲೆಗಳನ್ನು ಪರಿಶೀಲಿಸಿದಾಗ, ದೂರುದಾರರ ಹೆಸರಿನಲ್ಲಿರುವ ಖಾತೆ ರದ್ದುಗೊಂಡ ನಂತರ ಅವರು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ತುಮಕೂರು, ಅವರಿಗೆ ಅರ್ಜಿ ಸಲ್ಲಿಸಿದ್ದು, ಅವರು ಈ ಬಗ್ಗೆ ಪರಿಶೀಲಿಸಿ ದಿ.13.7.2007ರಂದು ದೂರುದಾರರ ನಿವೇಶನವು ಕಾನೂನುಬದ್ಧವಾಗಿದ್ದು, ಅವರಿಗೆ ಚೆಕ್ಕುಬಂದಿ ಗುರ್ತಿಸಿ ಹಕ್ಕುಪತ್ರದಲ್ಲಿರುವ ಅಳತೆಯಂತೆ ಅತಿಕ್ರಮಣವನ್ನು ತೆರವುಗೊಳಿಸಿ 1 ವಾರದೊಳಗೆ ವರದಿ ನೀಡುವಂತೆ ತಪ್ಪಿದಲ್ಲಿ ಎದುರುದಾರರ ವಿರುದ್ಧ ಕ್ರಮಕೈಗೊಳ್ಳುವುದಾಗಿ ಆಗಲೇ 1ನೇ ಎದುರುದಾರರಿಗೆ ಟಿಪ್ಪಣಿ ಹೊರಡಿಸಿರುತ್ತಾರೆ.

6. ದಿ.30.7.2015ರಂದು 1ನೇ ಎದುರುದಾರರು ನಿವೇಶನ ಸಂ.11 ಖಾತೆ 2051ರ ಕರ ನಿರ್ಧರಣಾ ಪಟ್ಟಿಯಿಂದ ಕೈಬಿಡಲು ಗ್ರಾಮಪಂಚಾಯತಿಗೆ ಆದೇಶ ನೀಡಲಾಗಿತ್ತು. ಆದರೆ ಮಾನ್ಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ತುಮಕೂರು ಅವರ ಆದೇಶದ ಮೇರೆಗೆ ದೂರುದಾರರ ನಿವೇಶನವನ್ನು ಯಥಾಸ್ಥಿತಿ ಕಾಪಾಡಲು ಸೂಚಿಸಿ ಜ್ಞಾಪನಪತ್ರ ಹೊರಡಿಸಿರುತ್ತಾರೆ.

ದಿ.1.6.2007ರಂದು 1ನೇ ಎದುರುದಾರರೇ ಇದೇ ನಿವೇಶನದ ಚೆಕ್ಕುಬಂದಿ ಗುರ್ತಿಸಿಕೊಡುವಂತೆ ಕಾರ್ಯದರ್ಶಿಗೆ ಮೆಮೋ ನೀಡಿರುತ್ತಾರೆ. ತೆರಿಗೆ ವಸೂಲಾತಿ ರಿಜಿಸ್ಟರಿನಲ್ಲಿ ದೂರುದಾರರ ಹೆಸರನ್ನು ಕಡಿಮೆ ಮಾಡಿದ ಬಗ್ಗೆ ದಾಖಲೆ ಲಭ್ಯವಿರುತ್ತದೆ.

7. ದೂರುದಾರರು ಇದೇ ವಿಷಯವಾಗಿ ದಾವೆ ಸಂ. 1010/2008 ದಾವೆ ಸಲ್ಲಿಸಿದ್ದು, ಅದರ ತೀರ್ಪಿನ ಪ್ರತಿ ಲಭ್ಯವಿರುವುದಿಲ್ಲ. ಆದರೆ ಈಗಾಗಲೇ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಆದೇಶದಂತೆ ದೂರುದಾರರಿಗೆ ನೀಡಿರುವ ನಿವೇಶನವನ್ನು ಹಕ್ಕುಪತ್ರದ ಪ್ರಕಾರ ಚೆಕ್ ಬಂದಿ ಗುರ್ತಿಸಿ ಒತ್ತುವರಿ ತೆರವುಗೊಳಿಸುವಂತೆ ಎದುರುದಾರರಿಗೆ ಆದೇಶಿಸಿರುವ ದಾಖಲೆ ಲಭ್ಯವಿರುತ್ತದೆ. ಆದರೆ ಎದುರುದಾರರು ಮೇಲಾಧಿಕಾರಿಗಳ ಆದೇಶದ ಪ್ರಕಾರ ಯಾವುದೇ ಕ್ರಮ ಜರುಗಿಸಿಲ್ಲದಿರುವುದು ಹಾಗೂ ದೂರುದಾರರಿಗೆ ನಿವೇಶನ ಗುರುತಿಸಿ ಒತ್ತುವರಿಯನ್ನು ತೆರವುಗೊಳಿಸಿಕೊಡಲು ವಿಫಲರಾಗಿರುವುದು ಕಂಡುಬರುತ್ತದೆ.

8. ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, **ದೂರುದಾರರ ಹೆಸರಿನಲ್ಲಿ ತುಮಕೂರು ತಾಲ್ಲೂಕು ಊರುಕೆರೆ ಗ್ರಾಮದ ಖಾತೆ ಸಂ.2051 ನಿವೇಶನ ಸಂ.11ನ್ನು ಪುನ: ಖಾತೆ ಮಾಡಿ ಹಕ್ಕುಪತ್ರದ ಪ್ರಕಾರ ಚೆಕ್ ಬಂದಿ ಗುರುತಿಸಿ ಹಾಗೂ ಯಾರಾದರೂ ನಿವೇಶನವನ್ನು ಅತಿಕ್ರಮಿಸಿದ್ದರೆ ಅದನ್ನು ತೆರವುಗೊಳಿಸಿ ದೂರುದಾರರಿಗೆ ಹಸ್ತಾಂತರಿಸಲು ಸೂಕ್ತ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು** ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

9. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ವರದಿ ಸಲ್ಲಿಸಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 11/7/17

**[ ನ್ಯಾಯಮೂರ್ತಿ ಸುಭಾಷ್ ಬಿ ಅಡಿ]**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ.**